**O.S.No. 7/2025**
**PW1**

ದಿನಾಂಕ  03.02.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್.ಎನ್ ವಕೀಲರಿಂದಃ

ಈ ಪ್ರಕರಣದಲ್ಲಿ ನಾನು ವಾದಿ ಬ್ಯಾಂಕಿನ ಮ್ಯಾನೇಜರ್ ಆಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಆತೋರೈಷನ್ ಲೆಟರನ್ನು ನಿಪಿ–1 ಎಂದು, ನೊಂದಾಯಿತ ಅಡಮಾನ ಪತ್ರವನ್ನು ನಿಪಿ–2 ಎಂದು, ಲೋನ್ ಎಗ್ರೀಮೆಂಟನ್ನು ನಿಪಿ–3 ಎಂದು, ಲೆಟರ್ ಆಫ್ ಗ್ಯಾರಂಟಿಯನ್ನು ನಿಪಿ–4 ಎಂದು, ಲೋನ್ ಸ್ಯಾಂಕ್ಷನ್ ಲೆಟರನ್ನು ನಿಪಿ–5 ಎಂದು, ಲೋನ್ ಅಪ್ಲಿಕೇಷನ್ ಅನ್ನು ನಿಪಿ–6 ಎಂದು, ನಾಲ್ಕು acknowledgment of Debt ಅನ್ನು 7 ರಿಂದ 10 ಎಂದು, loan ledger extract ಅನ್ನು ನಿಪಿ–11 ಎಂದು, ಆರು ಆರ್.ಟಿ.ಸಿ ಗಳನ್ನು ನಿಪಿ–12 ರಿಂದ 17 ಎಂದು, ಋಣಭಾರ ಪ್ರಮಾಣ ಪತ್ರವನ್ನು ನಿಪಿ–18 ಎಂದು ಗುರುತಿಸಲಾಯಿತು.

(ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ